# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು – 570 006

ಪ್ರವೇಶಾತಿ ವಿಭಾಗ

'ವಿಶ್ವವಿದ್ಯಾನಿಲಯದ 25ನೇ ವರ್ಷದ ಬೆಳ್ಳಿ ಹಬ್ಬದ ವರ್ಷಾಚರಣೆ' ಜೂನ್-2021 ರಿಂದ ಜೂನ್-2022 ರವರೆಗೆ

ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/2021-22 ದಿನಾಂಕ: 11.11.2021

**ಸುತ್ತೋಲೆ**

ವಿಷಯ: 2021-22ರ ಜುಲೈ(ನವೆಂಬರ್) ಆವೃತ್ತಿಯ ಪ್ರವೇಶಾತಿ ಸಂಬಂಧದಲ್ಲಿ ಸಾರ್ವತ್ರಿಕ ರಜಾ ದಿನಗಳಂದು ಕಚೇರಿ ಕಾರ್ಯ ನಿರ್ವಹಿಸುವ ಕುರಿತು:

ಉಲ್ಲೇಖ:1. ವಿವಿ ಅಧಿಸೂಚನೆ ಸಂಖ್ಯೆ:ಕರಾಮುವಿ/ಪ್ರವಿ/ಎಡಿಎಂ-1/95/21-22, ದಿನಾಂಕ: 04.10.2021
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10.11.2021

*****

2021-22ರ ಜುಲೈ(ನವೆಂಬರ್) ಆವೃತ್ತಿಯ ಪ್ರವೇಶಾತಿಯೂ ಈಗಾಗಲೇ ಕೇಂದ್ರ ಕಚೇರಿ ಮತ್ತು ಎಲ್ಲಾ ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರಾರಂಭವಾಗಿರುತ್ತದೆ. ಇತ್ತೀಚೆಗೆ ಕಳೆದ ಅಕ್ಟೋಬರ್ ಮಾಹೆಯಲ್ಲಿ ಸಾಲು ಸಾಲು ರಜೆಗಳಿಂದ ವಿದ್ಯಾರ್ಥಿಗಳು ವಿವಿ ನಿಲಯ / ಪ್ರಾದೇಶಿಕ ಕೇಂದ್ರಗಳಿಗೆ ಭೇಟಿ ನೀಡಲು ಸಾಧ್ಯವಾಗಿರುವುದಿಲ್ಲ. ವಿದ್ಯಾರ್ಥಿಗಳೂ ಸಹ ಪ್ರವೇಶಾತಿ ಕೋರಿ ರಜೆ ದಿನಗಳಲ್ಲಿ ಕಚೇರಿ ತೆರೆದಿರುವ ಬಗ್ಗೆ ದೂರವಾಣಿ ಮುಖೇನ ಸಂಪರ್ಕಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ 2021ರ ನವೆಂಬರ್ ಹಾಗೂ ಡಿಸೆಂಬರ್ ಮಾಹೆಗಳಲ್ಲಿನ ಎಲ್ಲಾ ಸಾರ್ವತ್ರಿಕ ರಜಾ ದಿನಗಳಲ್ಲಿ (ಎರಡನೇ ಮತ್ತು ನಾಲ್ಕನೇ ಶನಿವಾರ ಮತ್ತು ಎಲ್ಲಾ ಭಾನುವಾರಗಳು ಮತ್ತು ಸರ್ಕಾರದಿಂದ ರಜೆಯೆಂದು ಪರಿಗಣಿಸಲ್ಪಟ್ಟಿರುವ ದಿನಗಳು) ಕೇಂದ್ರ ಕಚೇರಿಯಲ್ಲಿನ **ಪ್ರವೇಶಾತಿ ವಿಭಾಗ, ಪಜಾ/ಪಪ ಘಟಕ ಮತ್ತು ಅಧ್ಯಯನ ಸಾಮಗ್ರಿ ವಿಭಾಗಗಳು ಹಾಗೂ ಎಲ್ಲಾ ಪ್ರಾದೇಶಿಕ ಕೇಂದ್ರಗಳು** ಕಚೇರಿಯನ್ನು ತೆರೆದು ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಕೋರಿ ಬರುವ ವಿದ್ಯಾರ್ಥಿಗಳಿಗೆ ಯಾವುದೇ ವ್ಯತ್ಯಯವಾಗದ ರೀತಿಯಲ್ಲಿ ಅನುಕೂಲ ಕಲ್ಪಿಸಿಕೊಡಲು ಸೂಚಿಸಿದೆ. ಸದರಿ ದಿನಗಳಂದು ಕೆಲಸದ ಒತ್ತಡಕ್ಕೆ ಅನುಗುಣವಾಗಿ ಕಚೇರಿ ಸಿಬ್ಬಂದಿಗಳನ್ನು ನಿಯೋಜಿಸುವುದು.

ಈ ಸಂಬಂಧ ಹಾಜರಾದ ದಿನಗಳಿಗೆ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆದು ಆಯಾ ನೌಕರರು ಮತ್ತು ಅಧಿಕಾರಿಗಳು ಪರಿಹಾರ ರಜೆಯನ್ನು ಪಡೆದುಕೊಳ್ಳಲು ಅನುಮತಿ ನೀಡಿದೆ.

ಕುಲಸಚಿವರು

11/11/21

ಗೆ:

1. **ನಿರ್ದೇಶಕರು(ಪ್ರವೇಶಾತಿ), ಕರಾಮುವಿ, ಮೈಸೂರು.**
2. **ಉಪಕುಲಸಚಿವರು ಪ್ರವೇಶಾತಿ ವಿಭಾಗ/ಅಧ್ಯಯನ ಸಾಮಗ್ರಿ ವಿಭಾಗ, ಕರಾಮುವಿ, ಮೈಸೂರು.**
3. **ಸಂಯೋಜನಾಧಿಕಾರಿಗಳು, ಪಜಾ/ಪಪ ಘಟಕ, ಕರಾಮುವಿ, ಮೈಸೂರು.**
4. **ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು.**

ಪ್ರತಿ:

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು ಇವರಿಗೆ - ಸದರಿ ಮಾಹಿತಿಯನ್ನು ಎಲ್ಲಾ ಕಲಿಕಾರ್ಥಿ ಸಹಾಯ ಕೇಂದ್ರಗಳ ಗಮನಕ್ಕೆ ತರುವುದು.
3. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
4. ಎಲ್ಲಾ ಶೈಕ್ಷಣಿಕ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
5. ಸಂಯೋಜನಾಧಿಕಾರಿಗಳು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ, ಮೈಸೂರು - ಸದರಿ ಮಾಹಿತಿಯನ್ನು ವಿವಿ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.
6. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
7. ಸೂಚನಾ ಫಲಕಕ್ಕೆ
8. ಕಚೇರಿ ಪ್ರತಿ.

MVN D Top Office Letters